**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾದ ಪ್ರಶ್ನೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರ ಉತ್ತರ.**

**ಪ್ರಶ್ನೆ:-**

1. ರಾಜ್ಯದಲ್ಲಿ ಸರ್ಕಾರಿ ಶಾಲೆಗಳು, 1982ರ ಅನುದಾನ ನೀತಿ ಸಂಹಿತೆಯಡಿಯಲ್ಲಿ ನಡೆಯುತ್ತಿರುವ 34 ಶಾಲೆಗಳು, 2010-11ರಲ್ಲಿ ಜಾರಿಗೊಳಿಸಿದ ಶಿಶುಕೇಂದ್ರಿಕೃತ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು 136 ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

2. ಸರ್ಕಾರಿ ಮತ್ತು ಅನುದಾನ ನೀತಿ ಸಂಹಿತೆಯಡಿಯಲ್ಲಿ ನಡೆಯುತ್ತಿರುವ ಶಾಲೆಗಳಲ್ಲಿ ವಿಶೇಷ ತರಬೇತಿ ಪಡೆದ ಶಿಕ್ಷಕರೇ ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ ಸೇವಾ ಭದ್ರತೆ, ವೇತನ ಕೊಡಲಾಗುತ್ತಿದೆ.

3. ಶಿಶುಕೇಂದ್ರಿಕೃತ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಶಾಲಾ ಶಿಕ್ಷಕರು, ಶಿಕ್ಷಕೇತರರಿಗೆ ಯಾವುದೇ ಭದ್ರತೆಯಿಲ್ಲ. ಜೀವನ ನಡೆಸಲು ಸಾಕಾಗುವಷ್ಟು ವೇತನವಿಲ್ಲವೆಂಬುದು ನೋವಿನ ಸಂಗತಿ.

4. ಸರ್ಕಾರದ ನಡೆಯಿಂದ ವಿಶೇಷ ಮಕ್ಕಳನ್ನು ಈ ದಿನಮಾನದಲ್ಲಿ ಸಮಾಜದ ಮುಖ್ಯ ವಾಹಿನಿಗೆ ತರುವುದು ತುಂಬಾ ಕಷ್ಟದ ಕೆಲಸವಾಗಿದೇ.

5. ಅಲ್ಲದೇ ವಿಶೇಷ ಶಾಲಾ ಶಿಕ್ಷಕರಾಗಲು ಹಿಂದೆ ಸರಿಯುತ್ತಿದ್ದಾರೆ. ಕಾರಣ ಇಲ್ಲಿ ಕೆಲಸ ಮಾಡುವವರಿಗೆ ಯಾವುದೇ ರೀತಿಯ ಭದ್ರತೆ ಇಲ್ಲ ಮತ್ತು ಇವರ ಸಂಬಳದಲ್ಲಿ ಈ ಹೊತ್ತಿನ ದಿನಮಾನದ ಖರ್ಚು ನಿರ್ವಹಣೆ ಮಾಡುವುದು ಕಷ್ಟಕರವಾಗಿದೆ. ಆದ್ದರಿಂದ, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಉತ್ತರ:-**

1. ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ವತಿಯಿಂದ ವಿಶೇಷ ಚೇತನ ಮಕ್ಕಳಿಗಾಗಿ ಬೆಂಗಳೂರು ನಗರ, ಮೈಸೂರು, ಬೆಳಗಾವಿ, ಕಲಬುರ್ಗಿ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಶ್ರವಣದೋಷವುಳ್ಳ ಮಕ್ಕಳಿಗಾಗಿ 05 ವಿಶೇಷ ಶಾಲೆಗಳನ್ನು ಹಾಗೂ ಮೈಸೂರು, ಹುಬ್ಬಳ್ಳಿ, ದಾವಣಗೆರೆ ಹಾಗೂ ಕಲಬುರ್ಗಿ ಜಿಲ್ಲೆಗಳಲ್ಲಿ 04 ಅಂಧ ಮಕ್ಕಳ ಶಾಲೆಗಳನ್ನು ನಡೆಸಲಾಗುತ್ತಿದೆ.

2. ಸ್ವಯಂ ಸೇವಾ ಸಂಸ್ಥೆಗಳ ಮೂಲಕ 1982ರ ರಾಜ್ಯ ಅನುದಾನ ಸಂಹಿತೆಯಡಿ 34 ವಿಶೇಷ ಶಾಲೆ/ತರಬೇತಿ ಕೇಂದ್ರಗಳು ಹಾಗೂ ವಿಶೇಷ ಚೇತನ ಮಕ್ಕಳ ಶಿಶುಕೇಂದ್ರೀಕೃತ ಯೋಜನೆಯಡಿ 141 ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ.

3. ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಣ ಪಡೆದು ತರಬೇತಿ ಹೊಂದಿದ್ದು ಹಾಗೂ ಆಯಾ ವಿಷಯದಲ್ಲಿ ಪರಿಣಿತಿ ಪಡೆದಿರುವ ಶಿಕ್ಷಕರನ್ನು ನೇಮಕ ಮಾಡಲಾಗಿರುತ್ತದೆ.

4. ಇಲಾಖಾ ವತಿಯಿಂದ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಕರನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಈ ಶಾಲೆಗಳಲ್ಲಿನ ವಿಶೇಷ ಶಿಕ್ಷಕರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮ 2004ರಂತೆ ನೇಮಕ ಮಾಡಿಕೊಳ್ಳಲಾಗುತ್ತದೆ.

5. 1982 ರಾಜ್ಯ ಅನುದಾನ ಸಂಹಿತೆ ಯೋಜನೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ಸಿಬ್ಬಂದಿಗಳ ನೇಮಕಾತಿಯನ್ನು 1982 ರಾಜ್ಯ ಅನುದಾನ ಸಂಹಿತೆಯನುಸಾರ ನಿಗದಿ ಪಡಿಸಿದ ವಿದ್ಯಾರ್ಹತೆಗನುಗುಣವಾಗಿ ವಿಶೇಷ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಸಂಸ್ಥೆಯವರು ಖಾಲಿ ಹುದ್ದೆಗಳಿಗೆ ಪತ್ರಿಕಾ ಪ್ರಕಟಣೆ ಹೊರಡಿಸಿ, ಸ್ವೀಕೃತ ಅರ್ಜಿಗಳನ್ನು ಇಲಾಖಾ ಮುಖ್ಯಸ್ಥರುಗಳನ್ನೊಳಗೊಂಡಂತೆ ಇರುವ ಸಮಿತಿಯ ಮುಂದೆ ಪರಿಶೀಲಿಸಿ ಆಯ್ಕೆಗೊಂಡ ಅಭ್ಯರ್ಥಿಯನ್ನು ಅನುಮೋದನೆಗಾಗಿ ಇಲಾಖಾ ಮುಖ್ಯಸ್ಥರಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗುತ್ತದೆ. ಇಲಾಖೆಯಿಂದ ಅನುಮೋದನೆ ನೀಡಿದ ಅಭ್ಯರ್ಥಿಗೆ ನೇಮಕಾತಿ ಆದೇಶವನ್ನು ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರು ನೀಡಲು ಅವಕಾಶ ಇರುತ್ತದೆ.

6. ವಿಶೇಷ ಚೇತನ ಮಕ್ಕಳ ಕೇಂದ್ರಿಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ಆಯಾ ಸಂಸ್ಥೆಯ ಮುಖ್ಯಸ್ಥರೇ ಗೌರವಧನದ ಆಧಾರದ ಮೇಲೆ ವಿಶೇಷ ಶಿಕ್ಷಕರನ್ನು ನೇಮಕಮಾಡಿಕೊಳ್ಳಲು ಅವಕಾಶವಿರುತ್ತದೆ. ಅಂಗವಿಕಲ ಮಕ್ಕಳ ಶಿಶುಕೇಂದ್ರೀಕೃತ ಯೋಜನೆಯ ಆದೇಶದಂತೆ ಆಯಾ ವಿಕಲಚೇತನತೆಗನುಗುಣವಾಗಿ ಆರ್.ಸಿ. ಐ ಯಿಂದ ಅನುಮೋದಿತ ವಿಶೇಷ ಶಿಕ್ಷಣ ಹೊಂದಿದ ವಿಶೇಷ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ.

7. ಇಲಾಖಾ ವತಿಯಿಂದ ನಡೆಯುತ್ತಿರುವ ಶಾಲೆಯ ಸಿಬ್ಬಂದಿಗಳಿಗೆ ಹಾಗೂ 1982ರ ರಾಜ್ಯ ಅನುದಾನಿತ ವಿಶೇಷ ಶಾಲೆಗಳ ಸಿಬ್ಬಂದಿಗಳಿಗೆ ಸರ್ಕಾರದ ನಿಯಮಾನುಸಾರ ನಿಗದಿಗೊಳಿಸಿದ ವೇತನವನ್ನೇ ಪಾವತಿ ಮಾಡಲಾಗುತ್ತಿದೆ.

8. ವಿಶೇಷ ಚೇತನ ಮಕ್ಕಳ ಶಿಶುಕೇಂದ್ರಿಕೃತ ವಿಶೇಷ ಶೈಕ್ಷಣಿಕ ಯೋಜನೆಯು ಮಕ್ಕಳ ಕೇಂದ್ರಿಕೃತ ಯೋಜನೆಯಾಗಿದ್ದು, ವಿದ್ಯಾರ್ಥಿಗಳ ಸಂಖ್ಯೆಗಳಿಗನುಸಾರವಾಗಿ ಅನುದಾನ ನೀಡಲಾಗುತ್ತಿದೆ. ಆದ್ದರಿಂದ ಆಯಾ ಸಂಸ್ಥೆಯ ಮುಖ್ಯಸ್ಥರೇ ಸಿಬ್ಬಂದಿಗಳನ್ನು ಗೌರವಧನದ ಆಧಾರದ ಮೇಲೆ ಯೋಜನಾ ಮಾರ್ಗಸೂಚಿ ಪ್ರಕಾರ ನಿಗದಿಗೊಳಿಸಿದ ಶೈಕ್ಷಣಿಕ ವಿದ್ಯಾರ್ಹತೆ ಪ್ರಕಾರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

9. ಸರ್ಕಾರದ ಆದೇಶ ಸಂಖ್ಯೆ: ಮಮಇ/153/ಪಿಹೆಚ್‌ಪಿ/2020, ದಿನಾಂಕ:14-09-2022ರಲ್ಲಿ ಹೆಚ್ಚಳ ಮಾಡಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

| ವಿವರ | ಪ್ರತಿ ಮಾಹೆಗೆ ಒಂದು ಮಗುವಿಗೆ ನೀಡುವ ಅನುದಾನ | |
|---|---|---|
| | **ಬುದ್ಧಿಮಾಂದ್ಯ ಮಕ್ಕಳ ಶಾಲೆ** | |
| | ಹಿಂದಿನ ಅನುದಾನ | ಪರಿಷ್ಕರಿಸಿದ ಅನುದಾನ |
| ವಸತಿಯುತ | 6,800/- | 10,200/- |
| ವಸತಿ ರಹಿತ | 6,000/- | 9,000/- |

| ವಿವರ | **ಶ್ರವಣ ಮತ್ತು ದೃಷ್ಟಿ ದೋಷ ಮಕ್ಕಳ ಶಾಲೆ** | |
|---|---|---|
| | ಹಿಂದಿನ ಅನುದಾನ | ಪರಿಷ್ಕರಿಸಿದ ಅನುದಾನ |
| ವಸತಿಯುತ | 6,200/- | 9,300/- |
| ವಸತಿ ರಹಿತ | 5,200/- | 7,800/- |

| **ಆಟಿಸಂ ಮಕ್ಕಳ ಹಗಲು ಯೋಗ ಕ್ಷೇಮ ಕೇಂದ್ರ** | |
|---|---|
| ಹಿಂದಿನ ಅನುದಾನ | ಪರಿಷ್ಕರಿಸಿದ ಅನುದಾನ |
| 10,000/- | 15,000/- |

10. ಸದರಿ ಅನುದಾನದಲ್ಲಿ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳ ಗೌರವಧನ, ಮಕ್ಕಳ ಪಥ್ಯಾಹಾರ ವೆಚ್ಚ, ವೈದ್ಯಕೀಯ ವೆಚ್ಚ, ಸಮವಸ್ತ್ರ ಭತ್ಯೆ, ಸಾರಿಗೆ ವೆಚ್ಚ, ಕಟ್ಟಡದ ಬಾಡಿಗೆ/ನಿರ್ವಹಣಾ ವೆಚ್ಚ, ಸಾದಿಲ್ವಾರು ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಒಳಗೊಂಡಿರುತ್ತದೆ.

11. ಸರ್ಕಾರದ ವಿಶೇಷ ಶಾಲೆಗಳಲ್ಲಿ, 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರು/ಶಿಕ್ಷಕೇತರರುಗಳಿಗೆ ಅನ್ವಯಿಸುವ ನಿಯಮಾವಳಿಗಳು ಹಾಗೂ ಮಾರ್ಗಸೂಚಿಗಳು ಶಿಶುಕೇಂದ್ರಿಕೃತ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ / ಶಿಕ್ಷಕೇತರರುಗಳಿಗೆ ಅನ್ವಯಿಸುವುದಿಲ್ಲ.

12. ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ: ಮಮಇ 153 ಪಿಹೆಚ್‌ಪಿ 2020 ರಲ್ಲಿ ವಿಶೇಷ ಮಕ್ಕಳ ನಿರ್ವಹಣಾ ವೆಚ್ಚಗಳೊಂದಿಗೆ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳ ಗೌರವಧನವನ್ನು ಸಹ ಪರಿಷ್ಕರಿಸಿರುವುದಿರಂದ 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರು/ಶಿಕ್ಷಕೇತರರುಗಳಿಗೆ ನೀಡುತ್ತಿರುವ ವೇತನ ಅಥವಾ ಸೇವಾ ಭದ್ರತೆಯನ್ನು ಶಿಶುಕೇಂದ್ರಿಕೃತ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ/ಶಿಕ್ಷಕೇತರರುಗಳಿಗೂ ಸರಿಸಮಾನವಾಗಿ ಒದಗಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

**ಸಂಖ್ಯೆ: ಮಮಇ 234 ಪಿಹೆಚ್‌ಪಿ 2023**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ ಸಚಿವರು.